9

ಇಲಾಖೆ / ವಿಷಯ : DEPARTMENT / SUBJECT: ವಿಧಾನಸಭೆ ಅಧಿವೇಶನ

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡಪ್ರಭ ದಿನಾಂಕ : DATE : 16/3/21

# ಬಿಎಸ್‌ವೈ, ಸಿದ್ದು ಜಟಾಪಟಿ

## ಸರ್ಕಾರ ರಚನೆಗೆ ಶಾಸಕರನ್ನು ಕಳಿಸಿದ್ದು ಸಿದ್ದು: ಸಿಎಂ ಬಾಂಬ್

## ಅಂತಹ ಪಾಪದ ಕೆಲಸ ಮಾಡುವ ದಾರಿದ್ರ್ಯ ಬಂದಿಲ್ಲ: ಸಿದ್ದು

16/3/21

- ಬಜೆಟ್ ಚರ್ಚೆಯ ವೇಳೆ ಬಿಎಸ್‌ವೈ ಸ್ಫೋಟಕ ಹೇಳಿಕೆ
- ಕಳಿಸಿದ್ದರೆ ನೇರವಾಗಿಯೇ ಕಳುಹಿಸುತ್ತಿದ್ದೆ: ಮಾಜಿ ಸಿಎಂ
- ನಾನು ಶಾಸಕರನ್ನು ಕಳಿಸಿದ್ದರೆ ಅವರನ್ನು ವಾಪಸ್ ಕಳ್ಸಿ: ಸಿದ್ದು

• ಕನ್ನಡಪ್ರಭ ವಾರ್ತೆ ವಿಧಾನಸಭೆ

'ಬಿಜೆಪಿ ಸರ್ಕಾರ ರಚನೆಗೆ ನೀವೇ ಅಲ್ಲವೇ ನಿಮ್ಮ ಶಾಸಕರನ್ನು ಕಳುಹಿಸಿದ್ದು.'

'ಅಂತಹ ದಾರಿದ್ರ್ಯ ನನಗಿನ್ನೂ ಬಂದಿಲ್ಲ. ಇಂತಹ ಪಾಪದ ಕೆಲಸ ನಾನು ಮಾಡಲ್ಲ. ಹಾಗೇನಾದರೂ ನಾನು ಕಳುಹಿಸಿದ್ದೀನಿ ಎನ್ನುವುದಾದರೆ ಈಗ ನಾನೇ ಹೇಳುತ್ತಿದ್ದೇನೆ ಅವರನ್ನು ವಾಪಸ್ ಕಳಿಸಿ...'

ಇದು ಮುಖ್ಯಮಂತ್ರಿ ಯಡಿಯೂರಪ್ಪ ಹಾಗೂ ವಿಪಕ್ಷ ನಾಯಕ ಸಿದ್ದರಾಮಯ್ಯ ನಡುವೆ ನಡೆದ ವಾಗ್ವಾದದ ಝಲಕ್.

ಬಜೆಟ್ ಚರ್ಚೆಯ ವೇಳೆ ರಾಜ್ಯ ಸರ್ಕಾರದ ವೈಫಲ್ಯಗಳನ್ನು ಎತ್ತಿ ತೋರಿಸಿ ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ತೀವ್ರ ವಾಗ್ದಾಳಿ ನಡೆಸಿದಾಗ ತಾಳ್ಮೆ ಕಳೆದುಕೊಂಡ ಮುಖ್ಯಮಂತ್ರಿ ಯಡಿಯೂರಪ್ಪ, ಬಿಜೆಪಿ ಸರ್ಕಾರ ರಚನೆಗೆ ಕಾಂಗ್ರೆಸ್ ಶಾಸಕರನ್ನು ಕಳುಹಿಸಿದ್ದು ನೀವೇ ಅಲ್ಲವೇ ಎಂಬ 'ಬಾಂಬ್' ಸಿಡಿಸಿದರು.

» 11

# ಬಿಎಸ್‌ವೈ, ಸಿದ್ದು ಜಟಾಪಟಿ

◄ ಮೊದಲ ಪುಟದಿಂದ

ಇದರಿಂದ ಕಲವಿಲಗೊಂಡ ಪ್ರತಿಪಕ್ಷ ನಾಯಕಸಿದ್ದರಾಮಯ್ಯ, 'ನನಗೆ ಅಂತಹ ದಾರಿದ್ರ್ಯ ಬಂದಿಲ್ಲ. ಅಂತಹ ದರಿದ್ರ, ಪಾಪದ ಕೆಲಸ ನಾನು ಮಾಡಲ್ಲ. ನಮ್ಮ ಶಾಸಕರನ್ನು ಕಳುಹಿಸುತ್ತೇನೆ ಎಂದು ನಾನು ನಿಮ್ಮ ಜೊತೆ ಬಂದು ಮಾತುಕತೆ ನಡೆಸಿದ್ದೆನಾ? ನಾನು ಕಳುಹಿಸಿದ್ದರೆ ಈಗ ವಾಪಸು ಕಳುಹಿಸಿ' ಎಂದು ಸವಾಲು ಹಾಕಿದರು.

ಈ ವೇಳೆ ಮಧ್ಯಪ್ರವೇಶಿಸಿದ ಜೆಡಿಎಸ್ ಶಾಸಕ ಸಾ.ರಾ.ಮಹೇಶ್, ಬಿಜೆಪಿ ಸರ್ಕಾರ ರಚನೆಗೆ ಸಿದ್ದರಾಮಯ್ಯ ಅವರೇ ತಮ್ಮ ಶಾಸಕರನ್ನು ಕಳುಹಿಸಿದರು ಎಂಬ ಮಾತುಗಳು ಅಲ್ಲಲ್ಲಿ ಕೇಳಿಬರುತ್ತಿವೆ. ಇದರ ಬಗ್ಗೆ ಸ್ಪಷ್ಟ ಚಿತ್ರಣವನ್ನು ಸಿದ್ದರಾಮಯ್ಯ ನೀಡಬೇಕು ಎಂದರು.

ಇದರಿಂದ ಮತ್ತೂ ಆಕ್ರೋಶಗೊಂಡ ಸಿದ್ದರಾಮಯ್ಯ, ನಾನು ಯಾರಿಗಾದರೂ ಕಳಿಸಿದ್ದರೆ ಧೈರ್ಯವಾಗಿ, ನೇರವಾಗಿಯೇ ಕಳುಹಿಸುತ್ತಿದ್ದೆ. ಆ ದಾರಿದ್ರ್ಯದ ಸ್ಥಿತಿ ನಮಗೆ ಬಂದಿಲ್ಲ. ನಾವಿನ್ನೂ ಆ ನೀಚ



ಮಟ್ಟಕ್ಕೆ ಇಳಿದಿಲ್ಲ, ನನ್ನ ರಾಜಕೀಯ ಜೀವನ ತೆರೆದ ಪುಸ್ತಕ. ಅಲ್ಲಲ್ಲಿ ಮಾತನಾಡುತ್ತಿದ್ದಾರೆ ಎಂದು ಸಾ.ರಾ.ಮಹೇಶ್ ಹೇಳುತ್ತಾರೆ. ಎಲ್ಲೆಲ್ಲಿ ಮಾತನಾಡುತ್ತಿದ್ದಾರೆ ಎಂದು ಕಿಡಿಕಾರಿದರು.

**ಉಪಚುನಾವಣೆ ಗೆದ್ದು ತೋರಿಸುತ್ತೇವೆ:** ಈ ವೇಳೆ ಮಧ್ಯಪ್ರವೇಶಿಸಿದ ಬಿ.ಎಸ್. ಯಡಿಯೂರಪ್ಪ, ನಾನು ಬಹಳ ಸ್ಪಷ್ಟವಾಗಿ ಹೇಳುತ್ತಿದ್ದೇನೆ. ನೀವು ಮುಂದಿನ ಸಲ ಅಧಿಕಾರಕ್ಕೆ ಬರುತ್ತೇನೆ ಎಂದು ತಿರುಕನ ಕನಸು ಕಾಣುತ್ತಿದ್ದೀರಿ. ನೀವು



ಟೀಕಿಸುತ್ತಿರುವ ಇದೇ ಬಜೆಟ್ ಅನ್ನು ಇಡೀ ರಾಜ್ಯದ ಜನತೆ ಮೆಚ್ಚಿಕೊಂಡಿದ್ದಾರೆ. ಮುಂದಿನ ಮೂರು ವಿಧಾನಸಭೆ ಹಾಗೂ ಒಂದು ಲೋಕಸಭೆ ಕ್ಷೇತ್ರಗಳ ಉಪ ಚುನಾವಣೆಯಲ್ಲಿ ಅಷ್ಟೂ ಕ್ಷೇತ್ರಗಳನ್ನೂ ಗೆಲ್ಲುತ್ತೇವೆ ಎಂದು ಸವಾಲು ಹಾಕಿದರು.

**ವಿಧಾನಸಭೆ ವಿಸರ್ಜಿಸಿ ಚುನಾವಣೆಗೆ ಬನ್ನಿ:** ಸಿದ್ದರಾಮಯ್ಯ ಮಾತನಾಡಿ, ನೀವು ಉಪ ಚುನಾವಣೆಗೆ ಬಂದು ಕುಸ್ತಿ ಮಾಡಿ ಎನ್ನಬೇಡಿ. ನಿಮಗೆ ಧೈರ್ಯವಿದ್ದರೆ ವಿಧಾನಸಭೆ ವಿಸರ್ಜನೆ ಮಾಡಿ ಬನ್ನಿ. ಚುನಾವಣೆಗೆ ಹೋಗೋಣ. ಜನರು ಯಾರಿಗೆ ಮತ ನೀಡುತ್ತಾರೆ ಎಂಬುದನ್ನು ನೋಡೇ ಬಿಡೋಣ ಎಂದು ಪ್ರತಿಸವಾಲು ಹಾಕಿದರು.

ಉಪ ಚುನಾವಣೆಗಳನ್ನು ನಮ್ಮ ಸರ್ಕಾರ ಇದ್ದಾಗ ನಾವೂ ಗೆದ್ದಿದ್ದೇವೆ. ಹೆಬ್ಬಾಳ ಹೊರತುಪಡಿಸಿ ಉಳಿದೆಲ್ಲಾ ಕಡೆಯೂ ಗೆದ್ದಿದ್ದೆವು. ಹೀಗಾಗಿ ಸರ್ಕಾರ ಇದ್ದಾಗ ಉಪ ಚುನಾವಣೆ ಗೆಲ್ಲುವುದು ಮುಖ್ಯವಲ್ಲ. ವಿಧಾನಸಭೆ ಚುನಾವಣೆ ಎದುರಿಸಿ ಬಂದರು. ಜೆಡಿಎಸ್‌ನ ಎಚ್.ಡಿ.ರೇವಣ್ಣ ಅವರು ತಾವೂ ಚುನಾವಣೆಗೆ ಸಿದ್ಧವಿರುವುದಾಗಿ ಘೋಷಿಸಿದರು.

ಸಚಿವ ಕೆ.ಎಸ್.ಈಶ್ವರಪ್ಪ ಮಾತನಾಡಿ, ವಿಧಾನಸಭೆ ವಿಸರ್ಜಿಸಿ ಚುನಾವಣೆಗೆ ಬರಲು ನಮಗೇನು ಗ್ರಹಚಾರಾನಾ? ಕಾಂಗ್ರೆಸ್ ಪಕ್ಷ ಯಾವಾಗ ಬೇಕೆಂದರೆ ಆಗ ಚುನಾವಣೆ ನಡೆಸಲು ಸಂವಿಧಾನಕ್ಕೆ ತಿದ್ದುಪಡಿ ತರಲಿ ಎಂದು ಆಗ್ರಹಿಸಿದರು. ಈ ವೇಳೆ ಸ್ಪೀಕರ್ ವಿಶ್ವೇಶ್ವರ ಹೆಗಡೆ ಕಾಗೇರಿ ಮಧ್ಯಪ್ರವೇಶಿಸಿ ಚರ್ಚೆಗೆ ಅಂತ್ಯ ಹಾಡಿದರು.